ಗ್ರಂಥಾಲಯದ ನಿರ್ವಹಣೆ

53 (33)

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಗ್ರಂಥಾಲಯ/ಇ–ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ?

ಆ) ಇವುಗಳ ನಿರ್ವಹಣೆಗೆ ರಾಜ್ಯ ಸರ್ಕಾರವು 2009ನೇ ಸಾಲಿನಿಂದ 2012ನೇ ಸಾಲಿನವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು?

ಇ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2012ರವರೆಗೆ ಸಂಗ್ರಹವಾಗಿರುವ Education cess ನ ಮೊತ್ತ ಎಷ್ಟು?

ಈ) ಇದರಲ್ಲಿ ಎಷ್ಟು ಹಣ ಗ್ರಂಥಾಲಯ ನಿರ್ವಹಣೆಗೆ ಬಿಡುಗಡೆಯಾಗಿದೆ; ಬಾಕಿ ಹಣ ಎಷ್ಟಿದೆ; ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ರೇವುನಾಯಕ್ ಬೆಳಮಗಿ (ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

ಅ) ಒಟ್ಟು ಗ್ರಂಥಾಲಯಗಳು : 182

ಇ–ಗ್ರಂಥಾಲಯಗಳು : 4

ಆ) ಇ–ಗ್ರಂಥಾಲಯ ನಿರ್ವಹಣೆ ಕುರಿತಂತೆ ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ ಆಗಿರುವುದಿಲ್ಲ. ನಗರ ಸುಂಕ ಪರಿಹಾರ ಧನ ರೂಪದಲ್ಲಿ 2009 ರಿಂದ 2012ನೇ ಸಾಲಿನವರೆಗೆ ಒಟ್ಟು ರೂ.90.00 ಲಕ್ಷಗಳನ್ನು 5 ವಲಯ ಕಛೇರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) ಗ್ರಂಥಾಲಯ ಇಲಾಖೆಗೆ ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.